# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103

ದೂರವಾಣಿ: 0816-2254546, 0816-2255596, 0816-2255597 ಫ್ಯಾಕ್ಸ್: 0816-2270719


ಸಂಖ್ಯೆ:ತು.ವಿ.ಸಾ,ವಿ:2026-27/609

ದಿನಾಂಕ: 21.05.2026

## ದರಪಟ್ಟಿ ಆಹ್ವಾನ (ವಿ.ವಿ ವೆಬ್ ಸೈಟ್ ಮುಖಾಂತರ)

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಆಡಳಿತ ಕಚೇರಿ, ಜ್ಞಾನಸಿರಿ ಕ್ಯಾಂಪಸ್, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಘಟಕ ಕಾಲೇಜುಗಳು, ಅತಿಥಿ ಗೃಹ, ವಿದ್ಯಾರ್ಥಿನಿಲಯಗಳು ಹಾಗೂ ಇತರೆ ವಿವಿಧ ವಿಭಾಗಗಳಿಗೆ ಕುಡಿಯುವ ನೀರನ್ನು ಸರಬರಾಜು ಪಡೆಯಲು ದರಪಟ್ಟಿಗಳನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:15.04.2026

*****

ತುಮಕೂರು ವಿಶ್ವವಿದ್ಯಾನಿಲಯದ ಆಡಳಿತ ಕಚೇರಿ, ಜ್ಞಾನಸಿರಿ ಕ್ಯಾಂಪಸ್, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಘಟಕ ಕಾಲೇಜುಗಳು, ಅತಿಥಿ ಗೃಹ, ವಿದ್ಯಾರ್ಥಿನಿಲಯಗಳು ಹಾಗೂ ಇತರೆ ವಿವಿಧ ವಿಭಾಗಗಳಿಗೆ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಕುಡಿಯುವ ನೀರನ್ನು ಸರಬರಾಜು ಪಡೆಯಲು ಕೆಳಕಂಡ ಷರತ್ತುಗಳಿಗೊಳಪಟ್ಟು ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| SL. No | Packing Sizes | Standard Specification for Drinking Water | Quantity | Rate in Rs.(As per agreement incl.All taxes) |
|---|---|---|---|---|
| 1 | 300ml Bottle | Portable water as per BIS Specification | Per Bottle | |
| | | | Per Box | |
| 2 | ½ Litre Bottle | | Per Bottle | |
| | | | Per Box | |
| 3 | 1 Litre Bottle | | Per Bottle | |
| | | | Per Box | |
| 4 | 20 Litre Can | | Per Can | |

ಷರತ್ತುಗಳು:

1. ಮುಚ್ಚಿದ ಲಕೋಟೆಯ ಮೇಲೆ "ವಿಶ್ವವಿದ್ಯಾನಿಲಯಕ್ಕೆ ದೈನಂದಿನ ಕುಡಿಯುವ ನೀರನ್ನು ಸರಬರಾಜು ಮಾಡಲು ದರಪಟ್ಟಿ" ಎಂದು ನಮೂದಿಸುವುದು.
2. ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು-572103, ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
3. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ FSSAI, BIS ಮತ್ತು ISI ಪ್ರಮಾಣ ಪತ್ರಗಳನ್ನು ತಮ್ಮ ದರಪಟ್ಟಿಯೊಂದಿಗೆ ಸಲ್ಲಿಸತಕ್ಕದ್ದು.
4. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ GST No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯೊಂದಿಗೆ ಲಗತ್ತಿಸತಕ್ಕದ್ದು.
5. ಕುಡಿಯುವ ನೀರಿನ ಕ್ಯಾನ್‌ಗಳ ಸರಬರಾಜನ್ನು ವಿಶ್ವವಿದ್ಯಾನಿಲಯವು ತಿಳಿಸುವ ಸ್ಥಳಗಳಿಗೆ/ ವಿಭಾಗಗಳಿಗೆ/ ಕಚೇರಿಗೆ ಸರಬರಾಜುದಾರರು ತಮ್ಮ ಸ್ವಂತ ವೆಚ್ಚದಲ್ಲಿಯೇ ಸರಬರಾಜು ಮಾಡುವುದು.
6. ಸರಬರಾಜು ಮಾಡುವ Water Can & dispenser ಗಳಿಗೆ ಪ್ರತ್ಯೇಕವಾಗಿ ಹಣ ಪಾವತಿಸುವುದಿಲ್ಲ.
7. ಸರಬರಾಜು ಮಾಡುವ Water Can & Dispenser ಗಳ ನಿರ್ವಹಣೆಯ ಜವಾಬ್ದಾರಿ ಸರಬರಾಜು ಸಂಸ್ಥೆಯವರದ್ದಾಗಿರುತ್ತದೆ.
8. ಸರಬರಾಜು ಮಾಡಲು ಯಾವುದೇ ಮುಂಗಡವನ್ನು ನೀಡಲಾಗುವುದಿಲ್ಲ.
9. ಸರಬರಾಜು ಆದೇಶದಲ್ಲಿ ತಿಳಿಸಿದ ಅವಧಿಯೊಳಗೆ ಅಥವಾ ವಿಸ್ತರಿಸಿದ ಅವಧಿಯೊಳಗೆ ಕುಡಿಯುವ ನೀರಿನ ಕ್ಯಾನ್‌ಗಳನ್ನು ಸರಬರಾಜು ಮಾಡಬೇಕು.

10. ಸದರಿ ದರಪಟ್ಟಿಯು **05.00**ಲಕ್ಷ ಮಿತಿಗೊಳಪಟ್ಟಿರುತ್ತದೆ.
11. ದರಪಟ್ಟಿಯಲ್ಲಿ ನಮೂದಿಸಿರುವ ದರಗಳು ತೆರಿಗೆ ಹಾಗೂ ಸೇವೆಯ ಮೊತ್ತವನ್ನು ಒಳಗೊಂಡಿರತಕ್ಕದ್ದು.
12. ದರಪಟ್ಟಿಯನ್ನು ಅಂಗೀಕರಿಸುವಾಗ ಸಂಸ್ಥೆಗಳು ಸಲ್ಲಿಸಿದ ದರಪಟ್ಟಿಯ ಸರಾಸರಿ ಮೊತ್ತವನ್ನು ಪರಿಗಣಿಸಲಾಗುವುದು.
13. ಸರಬರಾಜು ಸಂಸ್ಥೆಯವರು ಅಧಿಕೃತ ಮಾರಾಟಗಾರರು / ಸರಬರಾಜುದಾರರು / ತಯಾರಕರು ಆಗಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು.
14. ಸರಬರಾಜುದಾರರು ಈಗಾಗಲೇ ಸರಬರಾಜು ಮಾಡುತ್ತಿರುವ ಸಂಸ್ಥೆಗಳ ವಿವರಗಳನ್ನು ಮತ್ತು ಅವುಗಳ ದಾಖಲೆಗಳನ್ನು ಲಗತ್ತಿಸುವುದು.
15. ದರಪಟ್ಟಿಗಳ ಆಯ್ಕೆಯ ವಿಷಯದಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ ನಿಯಮಾವಳಿಗೆ ಬದ್ಧವಾಗಿ ಆಯ್ಕೆ ಮಾಡಲಾಗುವುದು ಮತ್ತು ಇದರಲ್ಲಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
16. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
17. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
18. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 01.06.2026 ಅಪರಾಹ್ನ 04.30** ಗಂಟೆ.
19. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

ಉಪಕುಲಸಚಿವರು,
ಉಪಕುಲಸಚಿವರು
ಸಾಮಾನ್ಯ ವಿಭಾಗ
ಸಾಮಾನ್ಯ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು).
3. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಕಚೇರಿ ಪ್ರತಿ.